ಆರ್ ಎ ನಂಃ 39/2023

ಪಿ.ಡಬ್ಲೂ 1

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು : **15.12.2025**

**ಮುಂದುವರೆದ ಪಾಟೀಸವಾಲುಃ ಎದುರುದಾರ ಪರ ವಕೀಲರಿಂದ**

ನಾನು ನನ್ನ ಹಿಂದಿನ ಸಾಕ್ಷಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೈ-ಕೋರ್ಟನಲ್ಲಿ ಕೆಲವು ಪ್ರಕರಣಗಳು ಬಾಕಿ ಇವೆ ಎಂದು ಹೇಳಿದ್ದು ಸದರಿ ಪ್ರಕರಣಗಳ ವಿವರಣೆ ಗೊತ್ತಾ ಎಂದರೆ ಸಾಕ್ಷಿ ಈಗ ಯಾವುದೇ ಪ್ರಕರಣ ಬಾಕಿ ಇಲ್ಲ ಆದರೆ ಮಾನ್ಯ ಹೈ-ಕೋರ್ಟ ಕೆಳ ನ್ಯಾಯಾಲಯಕ್ಕೆ ನಿರ್ದೇಶನ ಮಾಡಿರುತ್ತಾರೆ. ಸದರಿ ಹೈ-ಕೋರ್ಟ ಸಲ್ಲಿಸಿದ ಪ್ರಕರಣ ಸಂಖ್ಯೆ ನನಗೆ ಗೊತ್ತಿಲ್ಲ ಆದರೆ ಅಲ್ಲಿ ಎಫ್.ಡಿ.ಪಿ ಯನ್ನು ಹಾಕಿದ್ದೆವು ನಂತರ ಒಂದು ರಿಟ್ ಪಿಟಿಶನ್ ಹಾಕಿದ್ದೆವು. ಸದರಿ ಪ್ರಕರಣಗಳ ದಾಖಲೆಯನ್ನು ಹಾಜರು ಪಡಿಸಿದ್ದೆನೋ ಇಲ್ಲವೋ ನನಗೆ ಗೊತ್ತಿಲ್ಲ. 2015 ರಲ್ಲಿ ನಾವು ರಿಟ್ ಪಿಟಿಶನ್ ಹಾಕಿದ್ದೆವು. ಸದರಿ ರಿಟ್ ಪಿಟಿಶನ್ ನಾವು 2015 ರಲ್ಲಿ ಹಾಕಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳ ಬಗ್ಗೆ ನಮ್ಮ ತಂದೆಗೆ ಮಾಹಿತಿ ಇರುತ್ತದೆ. ನಾವು 2018 ರಲ್ಲಿ ರಿಟ್ ಪಿಟಿಶನ್ ನಂ.104457/2018 ದಾಖಲಿಸಿದ್ದೆವು ಎಂದರೆ ಸರಿ. ಸದರಿ ರಿಟ್ ಪಿಟಿಶನ್‌ನಲ್ಲಿರುವ ಆದೇಶವನ್ನು ಓದಿ ತಿಳಿದುಕೊಂಡಿರುತ್ತೇನೆ.

ಸದರಿ ಆದೇಶದಲ್ಲಿ ಎಫ್.ಡಿ.ಪಿ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸಲು ಯಾವುದೇ ನಿರ್ದೇಶನ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ 19-06-2024 ರಂದು ತೀರಿಕೊಂಡಿರುತ್ತಾರೆ. 2018 ರಲ್ಲಿ ಅವರು ಆರೋಗ್ಯವಾಗಿದ್ದರು ಎಂದರೆ ಸರಿ. ಸದರಿಯವರು ಕೋರ್ಟ್‌ಗೆ ಬಂದು ಹೋಗುತ್ತಿದ್ದರು ಎಂದರೆ ಆ ಸಮಯದಲ್ಲಿ ಅವರಿಗೆ ವಯಸ್ಸಾಗಿತ್ತು ಎಂದು ಹೇಳುತ್ತಾರೆ. ಎಫ್.ಡಿ.ಪಿ ಪ್ರಕರಣ 2011 ರಲ್ಲಿ ತೀರ್ಮಾನ ಆಗಿದ್ದು ಅದನ್ನು ಪ್ರಶ್ನೇ ಮಾಡಿ ನಮ್ಮ ತಂದೆ 2018 ರವರೆಗೂ ಬೇರೆ ನ್ಯಾಯಾಲಯದಲ್ಲಿ ಪ್ರಶ್ನೇ ಮಾಡಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಅವರಿಗೆ ಹಣಕಾಸಿನ ಹಾಗೂ ಆರೋಗ್ಯದ ಸಮಸ್ಯೆ ಇದ್ದುದ್ದರಿಂದ ಪ್ರಶ್ನೇ ಮಾಡಿಲ್ಲ. ನಾನು ಆ ಸಮಯದಲ್ಲಿ ಅವರಿಗೆ ಹಣದ ಹಾಗೂ ಆರೋಗ್ಯದ ಸಮಸ್ಯೆ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯರು ಸಲ್ಲಿಸಿದ ದಾವೆಯಲ್ಲಿ ನಮ್ಮ ತಂದೆ ಸಕ್ರಿಯವಾಗಿ ಭಾಗವಹಿಸಲು ನಿರಾಸಕ್ತಿ ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿಯವರಿಗೆ ಬೇರೆ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಹಾಗೂ ಪ್ರಕರಣದಲ್ಲಿ ಭಾಗವಹಿಸಲು ಆಸಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಎದುರುದಾರರಿಗೆ ಆಸ್ತಿ ಕೊಡಬಾರದು ಎಂದು ನಮ್ಮ ತಂದೆ ತೀರ್ಮಾನ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತು ಪತ್ರಾರ್ಜಿತ ಸ್ವತ್ತು ಎಂದು ನಮ್ಮ ತಂದೆ ಒಪ್ಪಿಕೊಂಡಿದ್ದರು ಎಂದರೆ ಸರಿ. ನಾವು ಪಾಲುವಿಭಾಗದ ಪ್ರಕಾರ ಬೇರೆ ಬೇರೆ ಆಗಿದ್ದೆವೆ

ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ನ್ಯಾಯಾಲಯದ ತೀರ್ಮಾನ ಆಗುವ ಮೊದಲು ಬೇರೆ ಬೇರೆ ಆಗಿದ್ದು ಆ ಪ್ರಕಾರ ಬೇರೆ ಇದ್ದೆವೆ ಎಂದು ಹೇಳುತ್ತಾರೆ. ನ್ಯಾಯಾಲಯದ ತೀರ್ಮಾನದ ಪ್ರಕಾರ ಎಲ್ಲರೂ ಬೇರೆ ಬೇರೆ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ಆರ್ಥಿಕ ಸಮಸ್ಯೆ ಇಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಮೇಲ್ಮನವಿ ಸಲ್ಲಿಸಿದ್ದೆವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.